<u>**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು**</u>

<u>**ಸೆಷನ್ಸ್ ಕೇಸ್ ನಂಬ್ರ 230/2023**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಶೋಭ | <u>ಪ್ರಾಸಾಃ 2</u> |
| ಗಂಡನ ಹೆಸರು | : | ಸೋಮಯ್ಯ | <u>ಚಾಸಾಃ 3</u> |
| ಪ್ರಾಯ | : | 50 ವರ್ಷ | ದಿನಾಂಕಃ **29.07.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಸದಾಶಿವಗಡ, ಕಾರವಾರ | |

<u>**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**</u>

ಮೃತ ಸುಮಿತ್ರಾ ನನ್ನ ತಂಗಿ. 1 ರಿಂದ 3ನೇ ಆರೋಪಿತರು ನನ್ನ ತಂಗಿ ಮೃತ ಸುಮಿತ್ರಾಳ ಮಕ್ಕಳು. ಮೃತ ಸುಮಿತ್ರಾಳು ಮುಲ್ಕಿಯ ಲಿಂಗಪ್ಪಯ್ಯ ಕಾಡು ಎಂಬಲ್ಲಿ ತನ್ನ 3 ಮಕ್ಕಳೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ನನ್ನ ತಂಗಿ ಮೃತ ಸುಮಿತ್ರಾ ಮುಲ್ಕಿಗೆ ಬಂದು ಸುಮಾರು 15 ವರ್ಷವಾಗಿತ್ತು. ಸುಮಿತ್ರಾಳ ಗಂಡ ಸುಮಿತ್ರಾಳು ಮೃತ ಪಡುವುದಕ್ಕಿಂತ ಒಂದು ವರ್ಷ ಮೊದಲೇ ಮೃತಪಟ್ಟಿರುತ್ತಾರೆ.

2. ನನ್ನ ತಂಗಿ ಯಾವಾಗಲೂ ನನ್ನ ಬಳಿ, ತನ್ನ ಮಕ್ಕಳು ಅವರವರೊಳಗೆ ಜಗಳವಾಡುತ್ತಾರೆ ಜೀವನವೇ ಬೇಸರವಾಗುತ್ತಿದೆ ಎಂದು ಹೇಳುತ್ತಿದ್ದಳು. ಸುಮಿತ್ರಾಳ ಗಂಡ ತೀರಿ ಹೋದ ನಂತರ ಆಕೆಗೆ ಸ್ವಲ್ಪ ಹಣ ಸಿಕ್ಕಿತ್ತು. ಆ ರೀತಿ ಬಂದ ಹಣವನ್ನು ಅವರ ಮಗ 3ನೇ ಆರೋಪಿ ಪ್ರಹ್ಲಾದ ಕೊಡುವಂತೆ ಅವರಲ್ಲಿ ಕೇಳುತ್ತಿದ್ದನು. ಅದಕ್ಕೆ ಸುಮಿತ್ರಾರವರು ತಾನು ಸತ್ತ ಮೇಲೆ ಆ ಹಣವು ಎಲ್ಲಾ

ಮಕ್ಕಳಿಗೆ ಸಿಗುತ್ತದೆ ಎಂದು ಹೇಳುತ್ತಿದ್ದಳು. ನನ್ನ ತಂಗಿ ಮೃತಪಡುವ ಒಂದು ತಿಂಗಳ ಮೊದಲು ನನ್ನ ಮನೆಗೆ ಬಂದಿದ್ದು ತನ್ನ ಮಕ್ಕಳು ತನಗೆ ತೊಂದರೆ ಕೊಡುತ್ತಿದ್ದಾರೆ ಎಂದು ನನ್ನ ಬಳಿ ಹೇಳಿಕೊಂಡಿದ್ದಳು. ಅದಕ್ಕೆ ನಾನು ಅವಳಿಗೆ ನನ್ನ ಮನೆಯಲ್ಲಿಯೇ ಇರುವಂತೆ ಹೇಳಿದ್ದೆ. 3 ಜನ ಮಕ್ಕಳು ನಂತರ ನನ್ನ ಮನೆಗೆ ಬಂದು ಅವರ ತಾಯಿಯನ್ನು ಇನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳುತ್ತೇವೆಂದು ಹೇಳಿ ಮುಲ್ಕಿಗೆ ಕರೆದುಕೊಂಡು ಹೋಗಿದ್ದರು. ಸುಮಿತ್ರಾರವರು ಮೃತಪಟ್ಟ ದಿನ ಮದ್ಯಾಹ್ನ 1.00 ಗಂಟೆಯ ಸಮಯಕ್ಕೆ ನನಗೆ ಫೋನ್ ಮಾಡಿ, ಮಕ್ಕಳು ತನಗೆ ತ್ರಾಸ್ ಕೊಡುತ್ತಿದ್ದಾರೆ, ಮಕ್ಕಳು ಮಕ್ಕಳ ನಡುವೆ ಹೊಡೆದಾಡಿಕೊಂಡು ನನ್ನೊಂದಿಗೆ ಸಹ ಜಗಳವಾಡಿ ನೀನು ಸಾಯಿ ನೀನು ಸತ್ತರೆ ನನಗೆ ಒಳ್ಳೆಯದು ಎಂದು ಬೈಯುತ್ತಿದ್ದಾರೆಂದು ತಿಳಿಸಿದ್ದಳು. ನಾನು ಆಕೆಗೆ ನನ್ನ ಮನೆಗೆ ಬರುವಂತೆ ಹೇಳಿದ್ದೆ. ಅದೇ ದಿನ ರಾತ್ರಿ 11.30 ಸಮಯಕ್ಕೆ ನನ್ನ ತಂಗಿ ವಾಸವಾಗಿದ್ದ ಮನೆಯ ಮಾಲೀಕರು ನನಗೆ ಫೋನ್ ಮಾಡಿ, ನನ್ನ ತಂಗಿ ತೀರಿಹೋಗಿದ್ದಾಳೆ ಅವಳನ್ನು ವೆನ್ಲಾಕ್ ಆಸ್ಪತ್ರೆಯಲ್ಲಿ ಇಡಲಾಗಿದೆ ಬಂದು ನೋಡಿ ಎಂದು ತಿಳಿಸಿದ್ದರು. ಕೂಡಲೇ ನಾನು ಮತ್ತು ನನ್ನಇಬ್ಬರು ಮಕ್ಕಳು ವೆನ್ಲಾಕ್ ಆಸ್ಪತ್ರೆಗೆ ಬಂದು ಮೃತ ನನ್ನ ತಂಗಿಯನ್ನು ನೋಡಿದ್ದೆವು.

3. ನನ್ನ ತಂಗಿ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದಳು. ಅವಳು ಅತ್ಮಹತ್ಯೆ ಮಾಡಿಕೊಳ್ಳಲು ಆಕೆಯ ಮಕ್ಕಳೇ ಕಾರಣರಾಗಿರುತ್ತಾರೆ. ಈ ವಿಚಾರವಾಗಿ ಪೋಲಿಸರಿಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ.ಕೆ.ಡಿ.ಎಸ್ ವಕೀಲರಿಂದ ಆರೋಪಿಯ ಪರ</u>**

4. ನನ್ನ ತಂಗಿ ಅವರ ಗಂಡ ತೀರಿಕೊಂಡ ನಂತರ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸಾಕ್ಷಿ ಹೇಳುತ್ತಾರೆ, ಈ ಮಕ್ಕಳು ತ್ರಾಸ್ ಕೊಡುತ್ತಿದ್ದುದರಿಂದ, ಖಿನ್ನತೆಗೆ ಒಳಗಾಗಿದ್ದಳು ಎಂದು. 3ನೇ ಆರೋಪಿ ನನ್ನ ತಂಗಿಯ ಬಳಿ ಹಣ ಕೇಳುತ್ತಿದ್ದ ವಿಚಾರವನ್ನು ನಾನು ನ್ಯಾಯಾಲಯದಲ್ಲಿ ಮೊದಲ ಬಾರಿ ಹೇಳಿದ್ದು ಎಂದರೆ ಸರಿ. ಘಟನೆ ನಡೆದ ದಿನ ಮದ್ಯಾಹ್ನವು ಆರೋಪಿತರು ಅವರ ತಾಯಿಯೊಂದಿಗೆ ಗಲಾಟೆ ಮಾಡಿದ್ದು, ಆಕಾರಣದಿಂದ ನನ್ನ ತಂಗಿ ನನಗೆ ಫೋನ್ ಮಾಡಿದ್ದರು. ನಾನು ಆರೋಪಿತರ ಬಳಿ ಅವರ ತಾಯಿಗೆ ಯಾಕೆ ಹಾಗೆ ಮಾಡುತ್ತಿದ್ದೀರಿ ಎಂದು ಕೇಳಿಲ್ಲ. ಸಾಕ್ಷಿ ಹೇಳುತ್ತಾರೆ, ಹಾಗೆ ಕೇಳಿದರೆ ಅವರು ಇನ್ನು ಹೆಚ್ಚು ಕುಡಿದು ಬರುತ್ತಾರೆ ಎಂದು.

5. ನನ್ನ ತಂಗಿ ಮಕ್ಕಳ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ, ಅವರೇ ಮಾನಸಿಕ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಹೇಳುತ್ತಾರೆ, ನನಗೆ ತಿಳಿದಂತೆ ಮಕ್ಕಳ ಕಿರುಕುಳದಿಂದಲೇ ಅವರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಆ ರೀತಿ ನಾನು ಭಾವಿಸಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿದ್ದು ಕೇಳಿದೆ, ಸರಿ ಇದೆ.

(ಶ್ರೀಧರ್ ಗೋಪಾಲಕೃಷ್ಣ ಭಟ್)
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು